ಆಗಿರಲಿಕ್ಕೂ ಸಾಕು. ಹೆಚ್ಚಿನ ವಿವರಣೆ ಕೊಡೊ ಮನ್ಸು ಇಲ್ಲ ಅಂದುಕೊಂಡು ಸ್ವಲ್ಪದರಲ್ಲೇ ಮುಗುಸ್ತೀನಿ. ನಮ್ಮಿಬ್ಬರ ಹಳೆ ಸಲುಗೆಯಲ್ಲಿ ಒಂದು ಮಾತು ಹೇಳಿಬಿಡ್ತೀನಿ, ಹೇಳಲೇ ಬಾರ್ದು ಅಂತ ಇದ್ದೆ, ಆದ್ರೂ ಹೇಳಿಬಿಡ್ತೀನಿ. ಬಹುಶಃ ನೀನು ನಿನ್ನ ಮಾವನಿಗೆ ಮೊಮ್ಮಗನ ಡಿಮ್ಯಾಂಡನ್ನು ಪರಿಹರಿಸೋ ಜವಾಬ್ದಾರಿ ಕೊಟ್ಟ ದಿನವೇ ಇದ್ದರೂ ಇರಬಹುದು- ಅವರು ನನಗೆ ಫೋನ್ ಮಾಡಿದ್ರು. ಅವರ ಮನಸ್ಸಿನಲ್ಲಿ ಏನು ಇತ್ತೋ ಏನೋ, ಎಷ್ಟು ಬೇಕೋ ಅಷ್ಟು ಅನ್ನೋ ಹಾಗೆ ಮಾತಾಡ್ತ, ಅವರು ಹೇಳಿದ್ರು, 'ನೋಡಪ್ಪಾ ಏಕಾಂಬ್ರ, ನಮಗೆ ನಮ್ದೇ ಹೊರಲಾರದ ಹಾಗೆ ಆಗಿದೆ. ಇನ್ನು ಬೇರೆ ಯಾರನ್ನೂ ನಾವು ಹಚ್ಚಿಕೊಳ್ಳಲೇಬಾರ್ದು ಅಂತ ಇದೀವಿ' ಅಂದ್ರು. ನಂಗೆ ಅವ್ರ ಮಾತು ಸ್ಪಷ್ಟ ಆಗ್ಲಿಲ್ಲ ಅಂತ ಅವ್ರಿಗೇ ಅನುಮಾನ ಬಂತೋ ಏನೋ, ಮತ್ತೂ ಹೇಳಿದ್ರು ಈ ಮಾತನ್ನ ನಿಂಗೊಬ್ಬನಿಗೆ ಅಂತ ಹೇಳ್ತಿಲ್ಲ ನನ್ನ ಮಗನ ಹತ್ತಿರ ಇದ್ದ ಎಲ್ಲರಿಗೂ ಹೇಳ್ತಿರೋದು... ಇಷ್ಟನ್ನ ಹೇಳಿ ಫೋನ್ ಇಟ್ರು. ಅವರಾಗಿಯೇ ಫೋನ್ ಮಾಡಿ, ಹೀಗೆ ಹೇಳಿದ್ದು ನನಗೆ ಸ್ಪಷ್ಟ ಸಂದೇಶ ಕೊಟ್ಟಿತ್ತು. ಆದರೆ ನಂಗೆ ಅವರ ಮಾತಿಂದ ಬೇರೆ ಏನೂ ಅನ್ನಿಸಲಿಲ್ಲ. ಈ ಏಕ್ಕನಿಗೆ ಅದು ಯಾವ ಲೆಕ್ಕ ಬಿಡು! ಆಮೇಲೆ ನಿಂಗೆ ಫೋನ್ ಮಾಡೋ ಸಾಹಸಕ್ಕೆ ಹೋಗಲಿಲ್ಲ. ಇನ್ನೊಂದು ವಿಷಯ ನಿಂಗೆ ಹೇಳ್ಬೇಕಿತ್ತು. ಮೊನ್ನೆ ಮೊನ್ನೆ ಆಫೀಸ್ ಅಕೌಂಟೆಂಟ್ ನರಸಿಂಗ್ ಜೊತೆ ಮಾತಾಡ್ತಾ ವಿಷಯ ನಮ್ಮ ಗುಣನ ಬಗ್ಗೆ ಬಂದು, ಕೊನೆಗೆ ನಿನ್ನ ಬಗ್ಗೇನೂ ಬಂತು. ಅವರು ನಿನ್ನ ಜೊತೆ ಇನ್ನೂ ಕಾಂಟ್ಯಾಕ್ಟ್‌ನಲ್ಲಿ ಇರೋದು ಕೇಳಿ ಸಮಾಧಾನ ಆಯಿತು. ಅವ್ರು ಮಾತಾಡ್ತಾ ಆಡ್ತಾ ನಿನ್ನ ಬಾಯಿತುಂಬಾ ಹೊಗಳ್ತಾ ಇದ್ರು! ಎಷ್ಟು ಅಂದ್ರೆ, ನಂಗೆ ಅನುಮಾನ, ಖುಷಿ, ಒಟ್ಟೊಟ್ಟಿಗೇ ಆಯ್ತು! ಸರಿಯಮ್ಮ, ಸುದ್ದಿ ಏನಾದ್ರು ಇದ್ರೆ ಈ ಏಕ್ಕನನ್ನ ಮರೀಬೇಡ. ನಿನ್ನ ಸ್ವೀಟ್ ಮೆಸೇಜ್‌ಗೆ ಕಾಯ್ತಾ ಇರ್ತೀನಿ...

**ಸುಮಂಗಲಮ್ಮ ಮತ್ತು ಸವೇರಾ:**

ಮಗಳೇ, ನೀನು ಒಬ್ಬಳೇ ಇದ್ದಾಗ ಏನೋ ಮಾತಾಡಬೇಕು ಅಂತ ಅಂದ್ಕೊಳ್ತಾ ವರ್ಷವೇ ಕಳೆದುಹೋಯ್ತು ನೋಡಮ್ಮ. ನೀನು ಬೆಳಗ್ಗೆ ಎಷ್ಟೊತ್ತಿಗೋ ಆಫೀಸ್‌ಗೆ ಹೋಗ್ತೀಯ, ರಾತ್ರಿ ಎಷ್ಟ್ ಹೊತ್ತಿಗೋ ಬರ್ತೀಯ... ಇನ್ನು ಭಾನುವಾರ- ಶನಿವಾರ, ಪಾಪ! ನಿನ್ ಸ್ವಂತ ಕೆಲಸವೇ ಹಾಸಿ ಹೊದಿಯೋವಷ್ಟು ಇರುತ್ತೆ...

ಈ ವಿಚಾರ ಸ್ವಲ್ಪ ಸೂಕ್ಷ್ಮ ಇರೋದ್ರಿಂದ ಅಳದೂ ಹೊಯ್ದು ಹೇಳ್ತಾ ಇದೀನಿ... ನಾವು ಊರಿಗೆ ಹೋಗಿ, ಇನ್ನು ಮುಂದೆ ಅಲ್ಲೇ ಇದ್ದು ಬಿಡೋಣ ಅಂತ ಇದೀವಿ. ನಿನ್ನ ಮಾವ ನನಗಾಗಿ ಬೆಂಗಳೂರಿಗೆ ಬಂದವರೇ ಹೊರತು ಅವರ ಮನಸೆಲ್ಲಾ ಅಲ್ಲೇ ಇರೋದು. ನಿಂಗೆ ಬರಬೇಕು ಅನ್ನಿಸಿದಾಗ ನೀನು ಅಲ್ಲಿಗೆ ಬಾ. ನಮಗೆ ಬರಬೇಕು ಅನ್ನಿಸಿದಾಗ ನಾವು ಇಲ್ಲಿಗೆ ಬರ್ತೀವಿ. ಹಾಂ! ಮಗಾ, ಇನ್ನೊಂದು ವಿಷಯ ಆಗಾಗ ನಿನ್ನ ಸ್ನೇಹಿತರೊಬ್ಬರು ನಮ್ಮ ಮನೆಗೆ ಬರ್ತಾ ಇರ್ತಾರಲ್ಲಮ್ಮ, ಪಂಜಾಬಿನವರು ಅಂತ ಕಾಣುತ್ತೆ, ಅದೇನೋ ಸಿಂಗ್ ಅಂತ, ಅವ್ರು ಇವತ್ತೂ ಬಂದಿದ್ರು... ನೀನು ಆಫೀಸ್ನಿಂದ ಬರೋ ಹೊತ್ತಾಗಿತ್ತು.ನಿನ್ನ ರೂಮಲ್ಲಿ ಕೂತ್ಕೊಳ್ಳಿಕ್ಕೆ ಹೇಳಿದೆ, ಕುಡೀಲಿಕ್ಕೆ ಏನಾದ್ರೂ ಕೊಡ್ಲಾ ಅಂತ ಕೇಳ್ದೆ, ಬೇಡ ಅಂದ್ರು... ಸರಿ, ಆಮೇಲೆ ನೀನು ಹೇಗೂ ಬಂದಿರ್ತೀಯ ಅಂದ್ಕೊಂಡು ನನ್ನಷ್ಟಕ್ಕೆ ನಾನು ಏನೋ ಕೆಲ್ಸ ಮಾಡ್ಕೊಂಡು ಒಳಗಿದ್ದೆ. ಸುಮಾರು ಒಂದ್ ಗಂಟೆ ಆಗಿತ್ತೋ ಏನೋ, ಪಾಪ! ಅಷ್ಟೂ ಹೊತ್ತು ಕಾದು, ಕೊನೆಗೆ, 'ಸವೇರಾ ಮೇಡಮ್ ಬರೋದು ಹೊತ್ತಾಗುತ್ತ ಏನೋ... ನಾನು ಮತ್ತೆಬರ್ತೀನಿ... ಮೊಬೈಲ್ ಕೂಡ ಮನೇಲೆ ಬಿಟ್ ಬಂದಿದೀನಿ' ಅಂತ ಹೇಳಿ ಹೊರಟು ಹೋದ್ರು. ಅಷ್ಟು ದೂರ ಹೋದವ್ರು ಮತ್ತೆ ಬಂದು, 'ಮೇಡಂ ನಿಮ್ಮ ಹತ್ರ ಏನಾದ್ರೂ ಮುಖ್ಯ ವಿಷಯ ಮಾತಾಡಿದ್ರ?' ಅಂತ ಕೇಳಿದ್ರು. ನಾನು, 'ಇಲ್ಲ' ಅಂತ ಹೇಳುವಷ್ಟರಲ್ಲಿ, 'ಇಲ್ಲ... ಇಲ್ಲ ಅದೇನೋ ಆಫೀಸ್ ವಿಚಾರ... ನಿಮ್ಮ ಹತ್ರ ಯಾಕೆ ಹೇಳ್ತಾರೆ ಬಿಡಿ...' ಅಂತ ತಡಬಡಿಸಿ ಹೊರಟೇಹೋದ್ರು...

**ಅನಿರುದ್ಧ ಮತ್ತು ಸವೇರಾ :**

ಅಮ್ಮ, ನೀನು ಸರಿಯಾಗಿಯೇ ಯೋಚನೆ ಮಾಡಿದ್ದೀಯಾ. ನಿನ್ನ ನಿರ್ಧಾರ, ನಿನಗಷ್ಟೇ ಯಾಕೆ ನಮಗೆಲ್ಲರಿಗೂ ಸಂತೋಷ, ನೆಮ್ಮದಿಯದ್ದು. ಇನ್ನು, ನೀನು ನನ್ನ ಒಪ್ಪಿಗೆಗೆ ಕಾಯೋದು ಯಾಕೆ